Regd No B G. 155

Sri

17—9—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅರಮನೆ ಸಿರಸ್ತೆದಾರ್ ಎಂ ವಿ. ಸುಬ್ಬರಾಯರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ವಿವಿಧ ವಿಷಯಗಳು

ನವದೆಹಲಿ— ಭಾರತದ ತೃತೀಯ ಪಂಚವಾರ್ಷಿಕ ಯೋಜನೆಯು ನಾಲ್ಕನೆ ವರ್ಷಕ್ಕೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಕ್ರಮಗಳಿಗೆಂದು 45 ಕೋಟಿ 24 ಲಕ್ಷ ರೂಗಳನ್ನು ಸಾಲದ ರೂಪದಲ್ಲಿ ಒದಗಿಸುವ ಬಗ್ಗೆ ಭಾರತ ಹಾಗೂ ಪಶ್ಚಿಮ ಜರ್ಮನಿ ಸಂಕಾರಗಳು ತಾ || 15 ರಂದು ಒಂದು ಒಪ್ಪಂದಕ್ಕೆ ಹಸಾಕ್ಷರವಿತ್ತವು.

ನಾಗಾಲ್ಯಾಂಡಿನ ಚೆಡವಾದಲ್ಲಿ ತಿರು ಪಕ್ಷ ಸಮ್ಮೇಳನ ಶಾಂತಿ ಸ್ಥಾಪನೆಗೆ ಸೇರಿದೆ

★

ನಾಗಾ ಜನರೊಡನೆ ಶಾಂತಿಮಾತು ಕತೆಗಳು ಈ ಮಾಹೆ 21 ರಿಂದ ಆರಂಭವಾಗುವದು

★

ಧಾನ್ಯದ ಕಾರ್ಪೊರೇರ್ವಗೆ ವಿದೇಶಾ ಕೇಂದ್ರವಾಗುವುದು

★

ಈ ವರ್ಷ ಜುಲೈನಲ್ಲಿ ತಿರುಪತಿ ದೇವ ಸ್ಥಾನದ ಉತ್ಪತ್ತಿ ರೂ 954211 ಇದರಲ್ಲಿ ಭಂಗಾರ ಬೆಳ್ಳಿ ಮುಂತಾದವು ಸೇರಿಲ್ಲ

★

ಜಲಸಮಾಧಿ

ವಾರಣಾಸಿಯಿಂದ ಬಂದಿರುವ ವರದಿಯಂತೆ ದೌತನ್ಪುರ ಗ್ರಾಮದ ಬಳಿ ಮಳೆ ನದಿಯಲ್ಲಿ ದೋಣಿ ಮುಳುಗಿ 14 ಮಂದಿ ಜಲ ಸಮಾಧಿ ಆದ ಭೀತಿ ಯೊದಗಿದೆ.

★

ನಾಳೆಯ ಪಂಚಾಂಗ

ದೈವಜ್ಞಶಿಖಾಮಣಿ
ಅಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

18 ಶುಕ್ರವಾರ ದ್ವಾದಶಿ ಶ್ರವಣ

ಕೇಂದ್ರದಿಂದ

ರಾಜ್ಯದಲ್ಲಿರುವ ಅಕ್ಕಿ ದಾಸ್ತಾನನ್ನು ವಚ್ಚಿಸಲು ಕೇಂದ್ರ ಆಹಾರ ಸಚಿವ ಶಾಖೆಯು 11300 ಟ್ಯ ಅಕ್ಕಿಯನ್ನು ರಾಜ್ಯಕ್ಕೆ ನೀಡಲು ನಿರ್ಧರಿಸಿದೆ : ಇದರಲ್ಲಿ 6300 ಟ್ಯ ಅಕ್ಕಿಯನ್ನು ಮಧ್ಯಪ್ರದೇಶ ಮತ್ತು ಮದಂತಾಸಿನಲ್ಲಿರುವ ಕೇಂದ್ರ ಡಿಪೋಗಳಿಂದ ಮತ್ತು 5000 ಟ್ಯ ಅಕ್ಕಿಯನ್ನು ಹೈದರಾಬಾದು ವತ್ತು ಕೋಚಕೋಡದಿಂದ ಸಂಬರಾಜು ಮಾಡಲಾಗುವುದು ; ಬೆಂಗಳೂರಿಗೆ ಮತ್ತಷ್ಟು ಗೋಧಿಯನ್ನು ಒದಗಿಸಲೂ ಕೇಂದ್ರ ಸರಕಾರ ನಿರ್ಧರಿಸಿದೆ.

★

ಗುಟ್ಟು

ನವದೆಹಲಿ— ಪ್ರಧಾನಿ ನೆಹರು ವತ್ತು ಷೇಕ ಅಬ್ದುಲರಿಗೆ ನಡೆದ ಮಾತ ಕತೆಯು ಪಂಕ್ಷ್ಮ ದಾಖಲೆ ಇದೆಯೆಂದೂ ಅದು ಗುಟ್ಟಿನ ವಿಷಯವೆಂದೂ ಮಂತ್ರಿ ಶ್ರೀ ಸ್ವರ್ಣಸಿಂಗರು ಹೇಳಿರುವರು.

★

ಪ್ರತಿಬಂಧವಿಲ್ಲ

ಪ್ರತಿಬಂಧವಿಲ್ಲ— ಕೋಮುವಾರು ಪಕ್ಷಗಳ ಮೇಲೆ ಪ್ರತಿಬಂಧ ಹಾಕಲು ರಾಜ್ಯಾಂಗ ತಿದ್ದುಪಡಿ ಮಾಡುವ ಯೋಜನೆಯು ಸರ್ಕಾರಕ್ಕಿಲ್ಲವೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

★

ಬೆಂಗಳೂರು — ಮಂತ್ರಿಮಂಡಲದ ವೇಲಿನ ಆಪಾದನೆ ಬಗ್ಗೆ ನ್ಯಾಯಾಂಗ ವಿಚಾರಣೆ ತಾವು ಸಿದ್ಧವೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿರುವರು.

—

ವಾಷಿಂಗ್ಟನ್— ಭಾರತ – ರಷ್ಯಾ ಶಸ್ತ್ರಾಸ್ತ್ರಗಳ ಒಪ್ಪಂದಕ್ಕೆ ಅಮೇರಿಕಾದ ಆಕ್ಷೇಪಣೆಯೇನೂ ಇಲ್ಲವೆಂದು ಸ್ಪೇಟು ಸೆಕ್ರೆಟರಿ ರೀನು ಉಸ್ಕರು ಹೇಳಿದರು.

ದಕ್ಷಿಣ ಆಫ್ರಿಕಾದ ಪ್ರಧಾನಿಯ ವಿಚಾರಣೆ

ಭಾರತದಿಂದ ಸಿಲೋನಿಗೆ 1000 ಎಮ್ಮೆಗಳು

ಕೊಲಂಬೊ— ಕೊಲಂಬೋ ಯೋಜನೆಯ ಮೇಲೆ ಭಾರತವು ಸಿಲೋನಿಗೆ ಉತ್ತಮ ತಳಿಯ 1000 ಎಮ್ಮೆಗಳನ್ನು ಕೊಡುವುದಾಗಿ ತಿಳಿಸಿದೆ.

★

ಸರಿಯಾದ ಕೆಲಸ

ನವದೆಹಲಿ— ಪೂರ್ವ ಬಂಗಾಳದಲ್ಲಿ ವಲಸೆಗಾರರು ಬಿಟ್ಟುಬಂದ ಆಸ್ತಿ ವಾಸ್ತು ಬಗ್ಗೆ ಪಾಕಿಸ್ತಾನದಿಂದ ಭಾರತಕ್ಕೆ ಪರಿಹಾರ ಬಂದೇಕೆಂದು ಶ್ರೀ ಚಟರ್ಜಿಯವರು ಸೂಚಿಸಿದ್ದನ್ನು ಮಂ ಶ್ರಿ ತ್ಯಾಗಿಯವರು ಅನುಮೋದಿಸಿದರು

—

ತಾಜಾ ಸಮಾಚಾರ

ಭಾರತರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನರು ಯಾಲ್ಟಾದಲ್ಲಿ ಮಾತನಾಡುತ್ತಾ, ರಷ್ಯಾ-ಭಾರತ ಗೆಳೆತನ ಯಶಸ್ವಿಯಾಗಿದೆ, ಎಂದರು

★

ನೇಪಾಳದ ಯುವರಾಜ ಮಹೇಂದ್ರರು ರಾಜರ ಗೈರುಹಾಜರಿನಲ್ಲಿ ಅವರ ಪ್ರತಿನಿಧಿಯಾಗಿ ರಾಜ್ಯಭಾರ ಮಾಡಲು ನಿನ್ನೆ ಹನುಮಾನು ಅರಮನೆಯಲ್ಲಿ ದರ್ಬಾರು ನಡೆಯಿತು

★

ವಿಶ್ವವಿದ್ಯಾನಿಲಯದ ಯುವಜನೋತ್ಸವ ದೆಹಲಿಯಲ್ಲಿ ನಡೆಯುವುದು.

★

ಬ್ರಿಟನಿನ ಸಾರ್ವಜನಿಕ ಚುನಾವಣೆ ಅಕ್ಟೋಬರು 15 ರಂದು ನಡೆಯುವುದು.

ಮಾಸ್ಕೊ ವಾರ್ತೆ ಇದು— ದಕ್ಷಿಣ ಆಫ್ರಿಕಾ ಪ್ರಧಾನಿ ವೆಂವೋಯರ್ಡರ ವಿಚಾರಣೆ ನಡೆಸಲು ಏರ್ಪಡಿಸಲಾಗಿದೆಯೆಂದು ರಷ್ಯಾ ವಾರ್ತಾ ಸಂಸ್ಥೆ ಪ್ರಕಟಿಸಿದೆ. ಬುದವಾರ ಇಲ್ಲಿ ಪ್ರಾರಂಭವಾಗುವ 'ಯೂತ್ ಫೋರಂ' ಡಾ|| ವೆರ್ವೊಯರ್ಡರ ವಿಚಾರಣೆಯನ್ನು, ವಿಶ್ವ ಅಭಿಮತ ನ್ಯಾಯಾಸ್ಥಾನದಲ್ಲಿ ನಡೆಸಲು ನಿರ್ಧರಿಸಿದೆ; ಅದು ಫೋರಂ ಅದಿವೇಶನದಲ್ಲಿ ಪ್ರಾರಂಭವಾಗಿ 1965 ರಲ್ಲಿ ಮುಗಿಯುವುದು ; ವಿಚಾರಣೆ ವಿಷಯವನ್ನು ರಷ್ಯಾ ಪ್ರತಿನಿಧಿ ಸೂಚಿಸಿದ್ದು, ಅಲ್ಜೀರಿಯಾ, ಪೂರ್ವಜರ್ಮನಿ, ಕೆನಿಯಾ, ಪೋರ್ಚುಗಲ್ ಮತ್ತಿತರ ಧೇಶಗಳ ಪ್ರತಿನಿಧಿಗಳು ಬೆಂಬಲಿಸಿರುವರು ; 5 ಪಾಸಿಕ್ಯೂಟ್ಯಂಗಳು, 23 ಸಮಿತಿ ಸದಸ್ಯರುಗಳುಳ್ಳ ಅಂತರಾಷ್ಟ್ರೀಯ ತನಿಖಾ ಸಮಿತಿ ಸ್ಥಾಪಿಸಲಾಗಿದೆ : ವೇಂವರ್ಡರ ಮೇಲೆ ಖಂಡನೆಯನ್ನು ರಚಿಸುವುದು-ಈ ಸಮಿತಿ ; ಪಾಸಿಕ್ಯೂಷನ್ ಪರ ದಕ್ಷಿಣ ಆಫ್ರಿಕಾ ಗಣರಾಜ್ಯ, ಭಾರತ, ಅಲ್ಜೀರಿಯಾ, ರಷ್ಯಾ, ಬ್ರಿಟನ್ನಿನ ಪ್ರಮುಖ ನ್ಯಾಯವಾದಿಗಳೂ, ನಾಯಕರೂ ವಾದಿಸುವರು

★

ಅಯೂಬರ ತುಲಾಭಾರ

ಕರಾಚಿ— ಅಧ್ಯಕ್ಷ ಅಯೂಬರ ತುಲಾಭಾರ ಮೊನ್ನೆ ನಡೆದು ಅವರ ತೂಕದಷ್ಟು ಬೆಳ್ಳಿ ಜೆಲೆ 22 ಸಾವಿರ ರೂಗಳು ಅವರಿಗೆ ಅರ್ಪಿಸಲಾಯಿತು

....

ಮಂತ್ರಿಗಳ ನಡವಳಿಕೆ

ಮಂತ್ರಿಗಳಿಗೆ ನಡವಳಿಕೆ ವಿಷಯಸಿದ್ಧವಾಗಿದೆ ಎಂದು ಭಾರತ ಗೃಹಮಂತ್ರಿ ಶ್ರೀ ನಂದಾ ತಿಳಿಸಿದರು

ವರ್ಣಾಶ್ರಮಧರ್ಮ

(ಮುಂದುವರಿದುದು)

ಒಬ್ಬ ಮನುಷ್ಯನಿಗೆ ಯಾವಾಗಲೂ ತಾನು ಮಾಡಬೇಕಾದ ಕರ್ತವ್ಯವಿರುವಾಗ ಆತನು ಸೋಮಾರಿಯಾಗಿರಲು ಅಥವಾ ತನ್ನ ಜ್ಞಾನಾನುಸಾರ ಇಚ್ಛಿಕ ಸುಖಗಳಿಗೆ ಬಲಿಯಾಗಲು ಸಾಧ್ಯವೇ ಇಲ್ಲ : ಆದುದರಿಂದಲೇ ಇತರ ಸಮಾಜಗಳೊಂದಿಗೆ ಹೋಲಿಸಿದಲ್ಲಿ, ಹಿಂದೂ ಸಮಾಜದಲ್ಲಿ ಬಹಳ ಕಮ್ಮಿ ಸಂಖ್ಯೆಯು ತಪ್ಪಿತಗಳು ನಡೆಯುತ್ತವೆ ; ಈ ರೀತಿಯ ಆಳವಾದ ಚಿಂತನೆ ಮತ್ತು ಸಮರ್ಪಕವಾದ ರೀತಿಯಲ್ಲಿ ವಿಂಗಡಿಸಿರುವ ಜೀವನಕ್ರಮ, ಇವು ವೈಜ್ಞಾನಿಕವೂ, ನೀತಿಪ್ರದವೂ ಆಗಿರುತ್ತೆ, ಮತ್ತು ಮನುಷ್ಯನು ಕೆಟ್ಟಯೋಚನೆ ಮಾಡದಂತೆ ತಡೆಯುತ್ತದೆ : ಇದರಿಂದಲೇ ಹಿಂದೂ ಸಮಾಜದಲ್ಲಿ ಕಳ್ಳತನ, ದರೋಡೆ, ಸುಳ್ಳುಹೇಳುವಿಕೆ ಮುಂತಾದವು ಇಲ್ಲವೇ ಇಲ್ಲ

ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಗ್ರೀಕ್ ದೇಶದಿಂದ ಬಂದ ಮೆಗಾಸ್ತನೀಸನು ಪ್ರಪಂಚದ ಅತ್ಯುಚ್ಚ ಭಾಷೆಯಾದ ಸಂಸ್ಕೃತದಲ್ಲಿ ಬೀಗ ಮತ್ತು ಬೀಗದಕೈ ಎಂಬುದಕ್ಕೆ ಪದಗಳೇ ಇಲ್ಲದಿರುವುದನ್ನು ನೋಡಿ ಆಶ್ಚರ್ಯಪಟ್ಟಿದ್ದಾನೆ : ಮೆಗಾಸ್ತನೀಸು ಒಬ್ಬನೇ ಅಲ್ಲ, ಅನೇಕ ವಿದೇಶೀ ಸಂಚಾರಿಗಳೂ ಕೂಡ ಹಿಂದೂಗಳ ಪ್ರಾಮಾಣಿಕತೆ ಮತ್ತು ಸತ್ಯತೆಯನ್ನು ನೋಡಿ ಆಶ್ಚರ್ಯಪಟ್ಟು ತಮ್ಮ ಮೆಚ್ಚಿಗೆಯನ್ನು ಸೂಚಿಸಿದ್ದಾರೆ ; ತಪ್ಪಿತಗಳು ಬಹಳ ಅಲ್ಪವಾಗಿದ್ದುದೂ ಏಕೆಂದರೆ, ಆ ಕಾಲದಲ್ಲಿ ಹಿಂದೂಗಳು ವರ್ಣಾಶ್ರಮಧರ್ಮವನ್ನು ಕಿಂಚಿತ್ತೂ ಲೋಪವಿಲ್ಲದಂತೆ ಆಚರಿಸುತ್ತಿದ್ದರು ; ಕಳ್ಳರೇ ಇಲ್ಲದಿದ್ದುದರಿಂದ ಯಾರಿಗೂ ಕೂಡ ಬೀಗ ಅಥವಾ ಬೀಗದಕೈಗಳ ಅವಶ್ಯಕತೆ ತೋರಲಿಲ್ಲ ; ಆದರೆ, ಅಯ್ಯೋ ! ಈಗಿನ ಹಿಂದುಗಳು ವರ್ಣಾಶ್ರಮಧರ್ಮವನ್ನು ಬಿಡುತ್ತಾ ಬರುತ್ತಿರುವುದರಿಂದ ದಿನೇದಿನೇ ಅಧರ್ಮ, ಅಸತ್ಯ, ತಪ್ಪಿತಗಳು ಜಾಸ್ತಿಯಾಗುತ್ತಿವೆ.

ವರ್ಣಾಶ್ರಮಧರ್ಮದ ಇನ್ನೊಂದು ಗುಣವೆಂದರೆ, ಅದಲ್ಲಿ ಹೇಳಲ್ಪಟ್ಟಿರುವ ಪ್ರತಿಯೊಂದು ಕರ್ಮವೂ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ ; ಅಂದರೆ ವೇದಗಳಲ್ಲಿಯೂ ಸ್ಮೃತಿಗಳಲ್ಲಿಯೂ ಹೇಳಲ್ಪಟ್ಟಿದೆ ; ಒಂದು ಭ್ರೂಣವು ತಾಯಿಯ ಗರ್ಭದಲ್ಲಿ ಬೆಳೆಯಲು ಆರಂಭಿಸಿದ ಒಡನೆಯೇ ಆದಂ ತಾಯಿತಂದೆಗಳು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ವಿಧಿಗಳಂತೆ ನಡೆಯಬೇಕು : ವರ್ಣಾಶ್ರಮಧರ್ಮದಲ್ಲಿ ಯಾರಿಗೂ ಕೂಡ ಅವರ ಇಚ್ಛೆ ಅಥವಾ ವ್ಯಸನಕ್ಕಾಗಿ ಯಾವ ಕೆಲಸ ಮಾಡಲೂ ಅವಕಾಶ ಕೊಡುವುದಿಲ್ಲ : ನಾಮಕರಣ, ಅನ್ನಪ್ರಾಶನ, ಚೂಡಾಕರ್ಮ, ಉಪನಯನ, ವಿವಾಹ, ಈ ಪ್ರತಿಯೊಂದು ಕರ್ಮವೂ ಕೂಡ ಪವಿತ್ರವಾದುದು, ಮತ್ತು ಆಯಾ ಕರ್ಮಗಳು ಯಾರಿಗೆ ಮಾಡಲ್ಪಡುತ್ತದೋ ಅವರನ್ನು ಮನುಷ್ಯತ್ವಕ್ಕೆ ತರುತ್ತದೆ ; ಈ ವಿಧಿಗಳು ಮನುಷ್ಯನು ನೈತಿಕ ರೀತಿಯು ಉಚ್ಚಮಟ್ಟವನ್ನು ಹೊಂದಲೂ ಕೂಡ ಅನುಕೂಲವಾಗಿರುತ್ತದೆ.

ಅನು.

— ಮುಂದುವರಿಯುವುದು —

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಶ್ರೀ ಪ್ರೊಫೆಸರ್ ರವೀಂದ್ರಕುಮಾರ್ ಸಿದ್ಧಾಂತಶಾಸ್ತ್ರಿ M. A., P. R. S. ರವರ 'ಪ್ರಾಚೀನ ಭಾರತೀಯ ಸಂಸ್ಕೃತಿ' ಎಂಬ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ

ಆ. ಸ. ಅಯ್ಯಂಗಾರ್, ಹೊಂಗೂರು.

Advertise in

The Oldest Newspaper in the State

Sri 'SATYAVADI' Daily

Chamarajapuram, Mysore 4

ವುಡ್‌ಲ್ಯಾಂಡ್ 11-9-64 ರಿಂದ

ಶಿಸ್ ಅಮೋಘ ಆರಂಭ

.... ಎ. ವಿ ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ– ಅಶೋಕಕುಮಾರ್, ವೈಜಯಂತಿಮಾಲಾ, ನಿಮ್ಮಿ, ಧರ್ಮೇಂದ್ರ, ವ್ಯಾಸ್

[ದಿನವಹಿ 3 ಪ್ರದರ್ಶನಗಳು]

ಅಪೆರಾ 18-9-64 ರಿಂದ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಪೋಸ್ಟ್ ಮಾನರ್

ಪಾತ್ರ– ವಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

SHAKTI SUDHA

Superb Tonic

Help The 'Gorakshana'

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋಂಕ್ಷಣೆ, ಪಶುಪಾಲನೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

'ಗೋಂಕ್ಷಣ' ಕ್ಕೆ ಸಹಾಯಧ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವಾರ್ಷಿಕ ಚಂದಾ 50 ನ ಪೈ

ಅಭಿಮಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ– ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ಸೇರುವುದು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವಂ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4